ಆಳಂದ್ ತಾಲ್ಲೂಕಿನ ಹೆಬ್ಬಳ್ಳಿ ರಸ್ತೆಯ ಬಗ್ಗೆ

೧೫೬೭. ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಳಂದ ತಾಲ್ಲೂಕು ಹೆಬ್ಬಳ್ಳಿ ರೋಡಿಗೆ ಸರ್ಕಾರದವರು ಎಂ.ಎನ್.ಪಿ. ಯೋಜನೆ ಅಡಿಯಲ್ಲಿ ರಸ್ತೆ ಮಂಜೂರು ಮಾಡಿರುವುದು ನಿಜವಲ್ಲವೆ,

ಆ) ಹಾಗಿದ್ದಲ್ಲಿ, ಯಾವ ವರ್ಷ ಕೆಲಸ ಪ್ರಾರಂಭಿಸಲಾಗುವುದು ಹಾಗೂ ಈ ಕೆಲಸ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು,

ಇ) ಈ ಕೆಲಸವನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಸಮಯಬೇಕಾಗಬಹುದು ಹಾಗೂ ಈ ಕೆಲಸವನ್ನು ಬೇಗ ಪೂರ್ತಿಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಯೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಹೌದು

ಆ) ಈ ಕೆಲಸವನ್ನು ೧೯೮೪-೮೫ನೇ ಸಾಲಿನಲ್ಲಿ ಇಲಾಖೆವತಿಯಿಂದ ತೆಗೆದುಕೊಳ್ಳಲಾಗಿದೆ. ಈ ರಸ್ತೆಯ ಮಣ್ಣಿನ ಕೆಲಸ ಮತ್ತು ಸಣ್ಣ ಆಡ್ಡ ಪೋರಿಗಳ ನಿರ್ಮಾಣದ ಕೆಲಸ ಈಗಾಗಲೇ ಮುಗಿಸಲಾಗಿದೆ ಈಗ ರಸ್ತೆಯ ಕೆಲಸವು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಗುಲಬರ್ಗಾದವರಿಗೆ ವರ್ಗಾಯಿಸಲಾಗಿದೆ. ಅವರು ಮುಂದಿನ ಕೆಲಸ ತೆಗೆದುಕೊಂಡಿದ್ದಾರೆ. ಮತ್ತು ಕೆಲಸವು ಪ್ರಗತಿಯಲ್ಲಿದೆ.

ಇ) ಈ ಕೆಲಸವು ಈಗ ಪ್ರಗತಿಯಲ್ಲಿ ಇದ್ದು. ಕೆಲಸವನ್ನು ಇದೇ ವರ್ಷ, ೧೯೮೫-೮೬ರಲ್ಲಿ ಪೂರ್ತಿಗೊಳಿಸುವ ಗುರಿ ಹೊಂದಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಲು ಕೊರೆತದ ಬಗ್ಗೆ

೧೬೬೭. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡದ ಕರಾವಳಿಯಲ್ಲಿ ಕಡಲು ಕೊರೆತದಿಂದ ಬಡವರಿಗೆ ಮತ್ತು ಮೀನುಗಾರರಿಗೆ ಭಾರೀ ಹಾನಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಕಡಲ್ಕೊರೆತ ತಡೆಯಲು ತಡೆಗೋಡೆ ನಿರ್ಮಾಣ ಮಾಡಲು ಸರ್ಕಾರವು ಶೀಘ್ರ ಕ್ರಮ ಕೈಗೊಳ್ಳುವುದೆ,

ಇ) ಉಳ್ಳಾಲದಲ್ಲಿ ಈಗಾಗಲೇ ಕಡಲ್ಕೊರೆತ ಪ್ರಾರಂಭವಾಗಿರುವುದರಿಂದ ತಡೆಗೋಡೆಯನ್ನು ಕಟ್ಟಲು ಸರ್ಕಾರವು ಆದೇಶ ನೀಡಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಸಮುದ್ರ ಕೊರೆತದ ತೀವ್ರತೆ ಮತ್ತು ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಸೂಕ್ತ ಅದ್ಯತೆಯ ಮೇರೆಗೆ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಹೌದು.